# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

***ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 27-01-2018ರಂದು ನಡೆದ ಸಭೆಯ ನಡವಳಿಗಳು***

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| **ಮಹದೇವ. ಎಂ. – ಅಧ್ಯಕ್ಷರು** | ಕೌನ್ಸಿಲ್ ಕಾರ್ಯದರ್ಶಿ, |
| **ಎಂ. ಆನಂದ್ – ಸದಸ್ಯರು** | ಉಪ ನಿಯಂತ್ರಕರು (ಹಣಕಾಸು-ಕೇಂದ್ರ), |
| **ಉಮಾ. ಎನ್ – ಸದಸ್ಯರು** | ಕಾರ್ಯಪಾಲಕ ಅಭಿಯಂತರರು (ಎಂ.ಪಿ.ಇ.ಡಿ), |
| **ಮಂಜುಳ ವಿಜಯಕುಮಾರ್ – ಸದಸ್ಯರು** | ಸಹಾಯಕ ಕಾರ್ಯಪಾಲಕ ಅಭಿಯಂತರರು (ಎಂ.ಪಿ.ಇ.ಡಿ), (ಗಿರಿನಗರ), |
| **ಅನ್ವರ್ ಪಾಷ. ಎಸ್ – ಸದಸ್ಯರು** | |
| **ಆಂಜನಪ್ಪ. ಎಂ – ಸದಸ್ಯರು** | ಸಹಾಯಕ ಕಾನೂನು ಅಧಿಕಾರಿ, |
| **ಕೆ.ಗಣೇಶ್ ರಾವ್ ಮಾನೆ – ಸದಸ್ಯರು** | ಸಂಬಂಧಪಟ್ಟ ಅಧಿಕಾರಿಗಳು, |
| **ದಾಸೇಗೌಡ. ಪಿ – ಸದಸ್ಯರು** | -- |
| **ಶಿವಕುಮಾರ್. ಕೆ – ಸದಸ್ಯರು** | -- |
| **ಎಂ. ವೆಂಕಟೇಶ್ (ಸಂಗಾತಿ) – ಸದಸ್ಯರು** | -- |
| **ಹೆಚ್.ಸಿ. ನಾಗರತ್ನ ರಾಮಮೂರ್ತಿ – ಸದಸ್ಯರು** | -- |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

***01]. ವಿಷಯದ ಸಂಖ್ಯೆ: ತೆಆಸ್ಥಾಸ/ 125 /2017-18***

ಪ್ರಧಾನ ಅಭಿಯಂತರರ ದಿನಾಂಕ: 25.09.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್-08ರಲ್ಲಿ 2016-17ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ0485 (Construction of Burial Grounds and brining Ghats with the approval of T&F Committee) ಅನುದಾನದಡಿ ಪ್ರಸ್ತಾಪಿತ ಕಾಮಗಾರಿಗೆ ಜಾಬ್‌ಕೋಡ್ ನೀಡಲು ಪ್ರಸ್ತಾವನೆ ಸಲ್ಲಿಸಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.

| Sl No | P-Code | Name of work | Est cost (In Lakhs) |
|---|---|---|---|
| 1 | P-0485 | Development of Burial Ground at Kodigehalli village in ward No.08 | 50.00 |
| 2 | P-0485 | Improvements of Burial Ground at Kodigehalli village in ward No.08 | 50.00 |

ಅನುದಾನ ಲಭ್ಯತೆಯ ಬಗ್ಗೆ ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳು ವರದಿ ಮಾಡಿರುವಂತೆ 2017-18ರ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-0485 ಲಭ್ಯವಿರುವ ರೂ.4560.00 ಲಕ್ಷಗಳ ಅನುದಾನದಲ್ಲಿ ವಾರ್ಡ್ ಸಂಖ್ಯೆ: 08ರ 02 ಕಾಮಗಾರಿಗಳ ಮೊತ್ತವಾದ ರೂ.100.00 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯಂತೆ ಕ್ರಮವಹಿಸಬಹುದಾಗಿದೆ ಎಂದು ಅಭಿಪ್ರಾಯಿಸಿದ್ದು, ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ವಾರ್ಡ್–08ರ ಮೇಲ್ಕಾಣಿಸಿದ 02 ಕಾಮಗಾರಿಗಳ ಒಟ್ಟು ಮೊತ್ತವಾದ ರೂ.100.00 ಲಕ್ಷಗಳಿಗೆ ಕ್ರಿಯಾ ಯೋಜನೆಗೆ ಅನುಮೋದನೆ ಮತ್ತು ಜಾಬ್‌ಕೋಡ್ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಪ್ರಸ್ತಾಪಿತ ಕಾಮಗಾರಿಗೆ 2018–19ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಅಳವಡಿಸಿಕೊಳ್ಳಲು ತೀರ್ಮಾನಿಸಿ, ಪ್ರಸ್ತಾವನೆಯನ್ನು ಹಿಂದಿರುಗಿಸಲಾಯಿತು.**

## *02]. ವಿಷಯದ ಸಂಖ್ಯೆ: ತೆಆಸ್ಥಾಸ/ 144 /2017–18*

ಪ್ರಧಾನ ಅಭಿಯಂತರರರ ದಿನಾಂಕ: 13–10–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮುಖ್ಯ ಅಭಿಯಂತರರು (ಪಶ್ಚಿಮ) ರವರು ಕಂಡಿಕೆ (07)ರಲ್ಲಿ ವಾರ್ಡ್ ನಂ.138ರಲ್ಲಿ ಕೈಗೊಳ್ಳಬೇಕಾದ ಕಾಮಗಾರಿಯಾದ Construction of Samudhaya bhavan at Flower Garden Rs.50.00 Lakhs ಗಳಿಗೆ ಅಂದಾಜು ಪಟ್ಟಿಯನ್ನು 2016–17ನೇ ಸಾಲಿನ ಲೋಕೋಪಯೋಗಿ ದರಪಟ್ಟಿಯ ದರಗಳನ್ನು ಅಳವಡಿಸಿ ತಯಾರಿಸಿದ್ದು ಲೆಕ್ಕಶೀರ್ಷಿಕೆ–0472ರ ಅಡಿಯಲ್ಲಿ ಅನುವು ಮಾಡಲು ಕೋರಿರುತ್ತಾರೆ. ಈ ಹಿನ್ನಲೆಯಲ್ಲಿ ಚಾಮರಾಜಪೇಟೆ ಮತಕ್ಷೇತ್ರದ ಶಾಸಕರು ಪತ್ರ ದಿ: 28.07.2017 ರಂದು ಸದರಿ ಕಾಮಗಾರಿಗೆ ಅನುದಾನ ಒದಗಿಸಲು ಕೋರಿರುತ್ತಾರೆ. ಮುಖ್ಯ ಆರ್ಥಿಕ ಅಧಿಕಾರಿರವರು ಕಂಡಿಕೆ (12) ರಲ್ಲಿ ಲೆಕ್ಕಶೀರ್ಷಿಕೆ ಪಿ–0472ರ ಅಡಿಯಲ್ಲಿ ಮೊತ್ತ ರೂ.50.00 ಲಕ್ಷಗಳ ಅನುದಾನವು ಲಭ್ಯವಿದ್ದು ಹಾಗೂ ಈ ಅನುದಾನಕ್ಕಾಗಿ ಸಮಿತಿಯ ಮುಂದೆ ಸಲ್ಲಿಸಲು ವರದಿ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರು ಆದೇಶಿಸಿದಂತೆ ವಾರ್ಡ್–138 ರಲ್ಲಿ ಮೇಲಿನ ಕಾಮಗಾರಿಯನ್ನು ಲೆಕ್ಕಶೀರ್ಷಿಕೆ ಪಿ–0472ರ ಅಡಿಯಲ್ಲಿ ಮೊತ್ತ ರೂ.50.00 ಲಕ್ಷಗಳನ್ನು ಅನುವು ಮಾಡಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *03]. ವಿಷಯದ ಸಂಖ್ಯೆ: ತೆಆಸ್ಥಾಸ/ 145 /2017–18*

ಪ್ರಧಾನ ಅಭಿಯಂತರರರ ದಿನಾಂಕ: 13–10–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.165ರ ವ್ಯಾಪ್ತಿಯಲ್ಲಿ 2016–17ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ–0055 (Encrochment clearance expenses demolition charges) ಅನುದಾನದಲ್ಲಿ ಪ್ರಸ್ತಾಪಿತ ಕಾಮಗಾರಿಯ ವಿವರ ಈ ಕೆಳಕಂಡಂತ್ತಿರುತ್ತದೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1 | Detailed Estimate for the work of dismantling of residential building deviated portion at property no.545, 22nd A cross, bsk 2nd stage, Bangalore in ward no 165. | 5.00 |

ಪದ್ಮನಾಭ ವಿಧಾನಸಭಾಕ್ಷೇತ್ರದ ಬನಶಂಕರಿ ಉಪವಿಭಾಗದ ಮೇಲ್ಕಾಣಿಸಿ ಕಾಮಗಾರಿಗೆ ವಾರ್ಡ್ ನಂ.165ರ ಗಣೇಶ ಮಂದಿರ, ಬನಶಂಕರಿ 2ನೇ ಹಂತ, 22ನೇ ಅಡ್ಡರಸ್ತೆ, ನಿವೇಶನದ ಸಂಖ್ಯೆ: 545 ರಲ್ಲಿ ಮಂಜೂರಾದ ನಕ್ಷೆಯನ್ನು ಉಲ್ಲಂಘಿಸಿ ಅನಧಿಕೃತ ಕಟ್ಟಡ ನಿರ್ಮಿಸಿದ್ದು ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗೆ ಜಾಬ್‌ಕೋಡ್ ನೀಡಲು ಮುಖ್ಯ ಅಭಿಯಂತರರು (ದಕ್ಷಿಣ) ರವರು ಪ್ರಸ್ತಾವನೆಯನ್ನು

ಸಲ್ಲಿಸಿದ್ದು ಹಾಗೂ ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳ ಅಭಿಪ್ರಾಯದಂತೆ 2016–17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ.9.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಮೇಲ್ಕಂಡ ಮಾನ್ಯ ಆಯುಕ್ತರವರ ಆದೇಶದಂತೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಮುಂದೆ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿರವರು ನಿರ್ಣಯಿಸಿದಂತೆ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಪ್ರಕರಣವು ಘನನ್ಯಾಯಾಲಯದಲ್ಲಿ ಬಾಕಿ ಇರುವ ಬಗ್ಗೆ ಪರಿಶೀಲಿಸಿ ಸೂಕ್ತ ಸ್ಪಷ್ಟಿಕರಣದೊಂದಿಗೆ ಸಮಿತಿಯ ಮುಂದೆ ಮಂಡಿಸಲು ತೀರ್ಮಾನಿಸಲಾಗಿರುತ್ತದೆ.

ಸಮಿತಿರವರ ತೀರ್ಮಾನದಂತೆ ಮುಖ್ಯ ಅಭಿಯಂತರರು (ದಕ್ಷಿಣ) ರವರು ವರದಿ ಮಾಡಿರುವಂತೆ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದಲ್ಲಿ ದಾಖಲಾಗಿರುವ ಅಪೀಲು ಸಂಖ್ಯೆ: 450/2010ರ ಪ್ರಕರಣವು ದಿನಾಂಕ: 20.02.2016ರಂದು ಇತ್ಯಾರ್ಥಪಡಿಸಿ ವಜಾಗೊಳಿಸಿರುವುದಾಗಿ ತಿಳಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರು ಆದೇಶಿಸಿದಂತೆ 2016–17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ.5.00 ಲಕ್ಷಗಳನ್ನು ಅಳವಡಿಸಿಕೊಂಡು ಸದರಿ ಕಾಮಗಾರಿಗೆ ಜಾಬ್‌ಸಂಖ್ಯೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಪ್ರಧಾನ ಅಭಿಯಂತರರರ ದಿನಾಂಕ: 13–10–2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## ***04]. ವಿಷಯದ ಸಂಖ್ಯೆ: ತೆಆಸ್ಥಾಸ/ 156 /2017–18***

ಪ್ರಧಾನ ಅಭಿಯಂತರರ ದಿನಾಂಕ: 28–10–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2017–18ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಅರಣ್ಯ ಘಟಕದ 2017–18ನೇ ಸಾಲಿನ ಮರಗಳ ವ್ಯವಸ್ಥಿತ ನಿರ್ವಹಣೆ ಕಾಮಗಾರಿಗೆ ವೆಚ್ಚ ಭರಿಸಲು ಸಲುವಾಗಿ ಪಿ–1701 ಲೆಕ್ಕಶೀರ್ಷಿಕೆ ಅಡಿ ಒಟ್ಟು ರೂ.793.42 ಲಕ್ಷಗಳ ಅನುದಾನದ ಅವಶ್ಯಕತೆ ಇದ್ದು, ಅದರಂತೆ ಬೇಡಿಕೆ ಸಲ್ಲಿಸಲಾಗಿತ್ತು ಆದರೆ, ಸದರಿ ಕಾಮಗಾರಿಗೆ 2017–18ರ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ರೂ.500 ಲಕ್ಷಗಳನ್ನು ಸೀಮಿತಗೊಳಿಸಿ ಅನುಮೋದನೆ ನೀಡಲಾಗಿದೆ.

2016–17ನೇ ಸಾಲಿನಲ್ಲಿ ಅರಣ್ಯ ಘಟಕದ ವತಿಯಿಂದ ಒಟ್ಟು 21 ಮರಗಳ ವ್ಯವಸ್ಥಿತ ನಿರ್ವಹಣೆ ತಂಡವು ಕಾರ್ಯ ನಿರ್ವಹಿಸುತ್ತಿದ್ದು, ವಾರ್ಷಿಕ ಕ್ರೀಯಾ ಯೋಜನೆಯು ಸದರಿ 21 ತಂಡಗಳನ್ನು 2017–18ನೇ ಸಾಲಿನಲ್ಲಿ ಕಾಮಗಾರಿಯನ್ನು ಹಿಂದಿನ ಸಾಲಿನ ಗುತ್ತಿಗೆದಾರರಿಂದಲೇ ಮುಂದುವರೆಸಲು ದಿ: 02.08.2017 ರಂದು ನಡೆ ತೋಟಗಾರಿಕಾ ಸ್ಥಾಯಿ ಸಮಿತಿಯು ಅನುಮೋದನೆ ನೀಡಿರುತ್ತದೆ ಹಾಗೂ ಇದು ಮಾನ್ಯ ಆಯುಕ್ತರಿಂದ ಅನುಮೋದನೆಗೊಂಡಿರುತ್ತದೆ.

2017–18ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–1701 ಲೆಕ್ಕಶೀರ್ಷಿಕೆಯಡಿ (ಮರಗಳ ವ್ಯವಸ್ಥಿತ ನಿರ್ವಹಣೆ ಕಾಮಗಾರಿ) ರೂ.500.00 ಲಕ್ಷಗಳ ಅನುದಾನ ಮಾತ್ರ ಲಭ್ಯವಿದ್ದು ಸದರಿ ಅನುದಾನವು ಒಟ್ಟು 21 ತಂಡಗಳಿಗೆ ಒಟ್ಟು 230 ದಿನಗಳಿಗೆ ವೆಚ್ಚ ಭರಿಸಲು ಸಾಧ್ಯವಾಗುತ್ತದೆ ಅಂದರೆ ಈ ಅನುದಾನದಲ್ಲಿ ದಿ: 01.04.2017 ರಿಂದ ದಿ: 16.11.2017ರ ವರೆಗಿನ ಅವಧಿಗೆ ಮಾತ್ರ ಕಾಮಗಾರಿ ನಿರ್ವಹಿಸಲು ಅವಕಾಶವಿರುತ್ತದೆ ಆದ್ದರಿಂದ ದಿ: 15.11.2017 ರಿಂದ ದಿ: 31.03.2018ರ ವರೆಗೆ ಒಟ್ಟು 135 ದಿನಗಳಿಗೆ ಒಟ್ಟು 21 ತಂಡಗಳಿಗೆ ದಿನವೊಂದಕ್ಕೆ ರೂ.10,350/– ರಂತೆ ಒಟ್ಟು ರೂ.293.42 ಲಕ್ಷಗಳ ಅನುದಾನದ ಕೊರತೆ ಉಂಟಾಗುತ್ತದೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರು ಆದೇಶದಂತೆ ಪ್ರಸ್ತುತ 2017-18ನೇ ಸಾಲಿನ ಅನುಮೋದಿತ ಕ್ರಿಯಾಯೋಜನೆಯಲ್ಲಿ ಕ್ರಮ ಸಂಖ್ಯೆ: 7ರ ಪಿ-1846ರ ಅಡಿಯಲ್ಲಿ ಸಸಿಗಳ ಉತ್ಪಾದನೆಗಾಗಿ ಒಟ್ಟು ರೂ.580.00 ಲಕ್ಷಗಳನ್ನು ಮೀಸಲಿರಿಸಿದ್ದು, ಇಷ್ಟೊಂದು ಮೊತ್ತವು ಸಸಿಗಳ ಉತ್ಪಾದನೆಗೆ ಅಗತ್ಯವಿಲ್ಲದೇ ಇರುವುದರಿಂದ ಈ ಮೊತ್ತದಲ್ಲಿ ಮರಗಳ ವ್ಯವಸ್ಥಿತ ನಿರ್ವಹಣೆಗೆ ಕಡಿಮೆ ಬೀಳುವ ರೂ.293.42 ಲಕ್ಷಗಳನ್ನು ಮರು ಹೊಂದಾಣಿಕೆ ಮಾಡಿಕೊಳ್ಳಲು ಉದ್ದೇಶಿಸಿದೆ. ಆದ್ದರಿಂದ ರೂ.580.00 ಲಕ್ಷಗಳ ಪೈಕಿ ರೂ.293.42 ಲಕ್ಷಗಳನ್ನು ಮರಗಳ ವ್ಯವಸ್ಥಿತ ನಿರ್ವಹಣೆ ಕಾಮಗಾರಿಯನ್ನು ದಿ: 31.03.2018 ರವರೆಗೆ ನಿರ್ವಹಿಸಲು ಅಗತ್ಯವಿರುವ ಮೊತ್ತವನ್ನು ಪಿ-1846 ಲೆಕ್ಕಶೀರ್ಷಿಕೆಯಡಿ ಮರು ಹೊಂದಾಣಿಕೆ ಮಾಡಿಕೊಡಲು ಹಾಗೂ ರೂ.293.42 ಲಕ್ಷಗಳಿಗೆ ಕಾಮಗಾರಿ ಸಂಕೇತವನ್ನು ನೀಡಲು ಅನುಮತಿ ಕೋರಿ ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**-ಮುಂದೂಡಿದೆ-**

## ***05]. ವಿಷಯದ ಸಂಖ್ಯೆ: ತೆಆಸ್ಥಾಸ/ 159 /2017-18***

ಪ್ರಧಾನ ಅಭಿಯಂತರರ ದಿನಾಂಕ: 28-10-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆಯ 2017-18ನೇ ಸಾಲಿನ ಆಯವ್ಯಯದಲ್ಲಿ ಸ್ಮಶಾನ ಮತ್ತು ಶವ ಸುಡುವ ಸ್ಥಳಗಳ ನಿರ್ಮಾಣ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಲೆಕ್ಕಶೀರ್ಷಿಕೆ ಪಿ-0485ರ ಅಡಿಯಲ್ಲಿ ಚಾಲ್ತಿ ಕಾಮಗಾರಿಗಳಿಗೆ 5000.00 ಲಕ್ಷಗಳ ಅನುದಾನವನ್ನು ಹಾಗೂ ಹೊಸದಾಗಿ ಚಾಮರಾಜಪೇಟೆ ಮತ್ತು ಕಲ್ಲಪಲ್ಲಿ ಹಾಗೂ ಬನಶಂಕರಿಯಲ್ಲಿ ಹೆಚ್ಚುವರಿಯಾಗಿ ವಿದ್ಯುತ್ ಚಿತಾಗಾರ ನಿರ್ಮಾಣ ಮಾಡಲು ಲೆಕ್ಕಶೀರ್ಷಿಕೆ ಪಿ-3245ರ ಅಡಿಯಲ್ಲಿ ಚಾಲ್ತಿ ಕಾಮಗಾರಿಗಳಿಗೆ ರೂ.600.00 ಲಕ್ಷಗಳು ಅನುವು ಮಾಡಲಾಗಿರುತ್ತದೆ. ಈ ವಿಚಾರದಲ್ಲಿ ಮುಖ್ಯ ಅಭಿಯಂತರರು (ಯೋಜನೆ-ಕೇಂದ್ರ) ರವರು ರುದ್ರಭೂಮಿಗಳ ಟೋಟಲ್ ಸ್ಟೇಷನ್ ಸರ್ವೆ, ಜಾಗ ಗುರುತು, ಒಳಭಾಗದಲ್ಲಿರುವ ಕಟ್ಟಡಗಳು ಹಾಗೂ ದಾರಿ ಮತ್ತು ಇತರೆ ವಿವರಗಳೊಂದಿಗೆ ನಕ್ಷೆ ತಯಾರಿಸಿರುವುದು ಸಮಗ್ರ ಅಭಿವೃದ್ಧಿಗೆ ನಕ್ಷೆಗಳು, ವಿನ್ಯಾಸಗಳನ್ನು ಹಾಗೂ ಅಂದಾಜು ಪಟ್ಟಿಗಳನ್ನು ತಯಾರಿಸಲು 08 ವಲಯಗಳಲ್ಲಿ ಈ ಕೆಳಕಂಡಂತೆ ಪ್ಯಾಕೇಜ್‌ಗಳಾಗಿ ವಿಂಗಡಿಸಲು ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ವಲಯ | ರುದ್ರಭೂಮಿಗಳು/ವಿಸ್ತೀರ್ಣ | ಪ್ಯಾಕೇಜ್‌ಗಳ ಸಂಖ್ಯೆ |
|---|---|---|---|
| 1. | ಪೂರ್ವ | 23 ರುದ್ರಭೂಮಿಗಳು (ಎ-10 ಬಿ-13) | 01 |
| 2. | ಪಶ್ಚಿಮ | 15 ರುದ್ರಭೂಮಿಗಳು (ಎ-01 ಬಿ-09-ಸಿ-5) | 01 |
| 3. | ದಕ್ಷಿಣ | 18 ರುದ್ರಭೂಮಿಗಳು (ಎ-07 ಬಿ-11) | 01 |
| 4. | ಯಲಹಂಕ | 12 ರುದ್ರಭೂಮಿಗಳು (ಎ-01 ಬಿ-08-ಸಿ-03) | 01 |
| 5. | ರಾಜರಾಜೇಶ್ವರಿನಗರ | 11 ರುದ್ರಭೂಮಿಗಳು (ಎ-01 ಬಿ-05-ಸಿ-06) | 01 |
| 6. | ಬೊಮ್ಮನಹಳ್ಳಿ | 71 ರುದ್ರಭೂಮಿಗಳು (ಎ-0 ಬಿ-27-ಸಿ-44) | 02 |
| 7. | ದಾಸರಹಳ್ಳಿ | 10 ರುದ್ರಭೂಮಿಗಳು (ಎ-0 ಬಿ-01-ಸಿ-09) | 01 |
| 8. | ಮಹದೇವಪುರ | 38 ರುದ್ರಭೂಮಿಗಳು (ಎ-01 ಬಿ-13-ಸಿ-24) | 01 |

ಈ ಮೇಲಿನ 09 ಪ್ಯಾಕೇಜ್‌ಗಳಿಗೆ 09 ಸಮಾಲೋಚಕರನ್ನು ಪ್ರತ್ಯೇಕವಾಗಿ ನೇಮಿಸಲು ಅವಶ್ಯಕತೆ ಇರುತ್ತದೆ. ಈ ಕಾರ್ಯಕ್ಕೆ (ಅ) ಪ್ರತಿ ರುದ್ರಭೂಮಿಯನ್ನು ಟೋಟಲ್ ಸ್ಟೇಷನ್ ಸರ್ವೆ ಮುಖಾಂತರ ಸರಹದ್ದು ಗುರುತಿಸುವುದು ಹಾಗೂ ರುದ್ರಭೂಮಿಯಲ್ಲಿ ಹಾಲಿ ಇರುವ ಕಟ್ಟಡಗಳು ಕಾಲು ದಾರಿ ಮತ್ತು ಇತ್ಯಾಧಿಗಳನ್ನು ಸಿದ್ದಪಡಿಸುವುದು ಮತ್ತು (ಆ) ರುದ್ರಭೂಮಿಗಳಲ್ಲಿ ಇರುವ ಹಾಲಿ ಕಟ್ಟಡಗಳ ನವೀಕರಣ, ಹೊಸದಾಗಿ ಕಛೇರಿ ಮತ್ತು ಕಾವಲುಗಾರರ ಕಟ್ಟಡ, ವಿಧಿವಿಧಾನಗಳನ್ನು ನಿರ್ವಹಿಸುವ ಕಟ್ಟಡ, ಬೋರ್‌ವೆಲ್, ಟ್ಯಾಂಕ್ ನಿರ್ಮಾಣ ಮತ್ತು ನೀರು ಸರಬರಾಜು ಮತ್ತು ಕಾಂಪೌಂಡ್ ಗೋಡೆ, ಗೇಟ್ ಅಳವಡಿಸುವುದು, ಶೌಚಾಲಯ, ಕಾಲುದಾರಿ ನಿರ್ಮಾಣ, ತ್ಯಾಜ್ಯ ನಿರ್ವಹಣೆ, ಕುಳಿತುಕೊಳ್ಳುವ ಆಸನಗಳ ವ್ಯವಸ್ಥೆ, ಬರುವ ಸಾರ್ವಜನಿಕರು ತಂಗುದಾಣ, ವಿದ್ಯುತ್ ಚಿತಾಗಾರ, ದಾರಿದೀಪ ಮತ್ತು ಇನ್ನಿತರೆ ಅವಶ್ಯಕ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ ನಕ್ಷೆಗಳು, ವಿನ್ಯಾಸಗಳನ್ನು ಹಾಗೂ ಅಂದಾಜು ಪಟ್ಟಿಗಳನ್ನು ತಯಾರಿಸಲು ಪ್ರಸ್ತಾವನೆಗೆ ಮಾನ್ಯ ಆಯುಕ್ತರು ಡಿಪಿಆರ್ ಸಿದ್ದಪಡಿಸಲು ಸಮಾಲೋಚಕರನ್ನು ನೇಮಿಸಲು ಟೆಂಡರ್ ಆಹ್ವಾನಿಸಲು ಅನುಮೋದನೆ ನೀಡಿರುತ್ತಾರೆ.

ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರು ಪತ್ರ ಸಂ.135/02, ದಿ: 25.04.2017ರಲ್ಲಿ ರುದ್ರಭೂಮಿಗಳು ಮತ್ತು ಚಿತಾಗಾರಗಳಲ್ಲಿ ಸಮಗ್ರ ಅಭಿವೃದ್ಧಿ, ಚಾಮರಾಜಪೇಟೆ ಬನಶಂಕರಿ ಮತ್ತು ಕಲ್ಲಹಳ್ಳಿ ರುದ್ರಭೂಮಿಯಲ್ಲಿ ವಿದ್ಯುತ್ ಚಿತಾಗಾರ ನಿರ್ಮಾಣ ರುದ್ರಭೂಮಿಗಳ ಸಮಗ್ರ ಸುಧಾರಣೆ ರುದ್ರಭೂಮಿ, ಚಿತಗಾರಗಳಿಗೆ ಮತ್ತು ಇನ್ನಿತರೇ ಕಾರ್ಯಗಳನ್ನು ಪೂರ್ಣಗೊಳಿಸುವುದು ಸೂಕ್ತವಾಗಿರುತ್ತದೆ. ಎಂದು ಸೂಚಿಸಿರುತ್ತಾರೆ.

ಈ ಆದೇಶದಂತೆ ಮುಖ್ಯ ಅಭಿಯಂತರರು (ಯೋಜನೆ-ಕೇಂದ್ರ) ರವರು 2017-18ನೇ ಸಾಲಿನ ಆಯವ್ಯಯದಲ್ಲಿ ಸ್ಮಶಾನ ಮತ್ತು ಶವ ಸುಡುವ ಸ್ಥಳಗಳ ನಿರ್ಮಾಣ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಲೆಕ್ಕಶೀರ್ಷಿಕೆ ಪಿ-1485ರ ಅಡಿಯಲ್ಲಿ ಚಾಲ್ತಿ ಕಾಮಗಾರಿಗಳಿಗೆ 5000.00 ಲಕ್ಷಗಳ ಅನುದಾನವನ್ನು ಹಾಗೂ ಹೊಸದಾಗಿ ಚಾಮರಾಜಪೇಟೆ ಮತ್ತು ಕಲ್ಲಪಲ್ಲಿ ಹಾಗೂ ಬನಶಂಕರಿಯಲ್ಲಿ ಹೆಚ್ಚುವರಿಯಾಗಿ ವಿದ್ಯುತ್ ಚಿತಾಗಾರ ನಿರ್ಮಾಣ ಮಾಡಲು ಲೆಕ್ಕಶೀರ್ಷಿಕೆ ಪಿ-3245 ರ ಅಡಿಯಲ್ಲಿ ಚಾಲ್ತಿ ಕಾಮಗಾರಿಗಳಿಗೆ ರೂ.600.00 ಲಕ್ಷಗಳು ಅನುವು ಮಾಡಿದ್ದು ಜಾಬ್‌ಕೋಡ್‌ಗಳನ್ನು ನೀಡಲು ಕೋರಿರುತ್ತಾರೆ. ಮುಂದುವರೆದಂತೆ ಮುಖ್ಯ ಆರ್ಥಿಕ ಅಧಿಕಾರಿರವರು ಲೆಕ್ಕಶೀರ್ಷಿಕೆ ಪಿ-0485ರಡಿಯಲ್ಲಿ ರೂ.450.00 ಲಕ್ಷಗಳಿಗೆ ವಾರ್ಡ್-79 ಮತ್ತು 61ರ ಪ್ರಸ್ತಾವನೆ ಸಲ್ಲಿಸಲಾಗಿದ್ದು ಮತ್ತು ಲೆಕ್ಕಶೀರ್ಷಿಕೆ ಪಿ-3248 ಅಡಿಯಲ್ಲಿ ರೂ.200.00 ಲಕ್ಷಗಳಿಗೆ ವಾರ್ಡ್-79 ಮತ್ತು 61ರ ಪ್ರಸ್ತಾವನೆ ಸಲ್ಲಿಸಲಾಗಿದ್ದು ಎಂದು ವರದಿ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರು ಆದೇಶದಂತೆ, ಸ್ಮಶಾನ ಮತ್ತು ಶವ ಸುಡುವ ಸ್ಥಳಗಳ ನಿರ್ಮಾಣ ಮತ್ತು ಅಭಿವೃದ್ಧಿ ಹಾಗೂ ಹೊಸದಾಗಿ ಚಾಮರಾಜಪೇಟೆ ಮತ್ತು ಕಲ್ಲಪಲ್ಲಿ ಹಾಗೂ ಬನಶಂಕರಿಯಲ್ಲಿ ಹೆಚ್ಚವರಿಯಾಗಿ ವಿದ್ಯುತ್ ಚಿತಾಗಾರ ನಿರ್ಮಾಣ ಕಾಮಗಾರಿಗಳಿಗೆ ಲೆಕ್ಕಶೀರ್ಷಿಕೆ ಪಿ0485 ಮತ್ತು ಪಿ3245 ಗಳಲ್ಲಿ ಯಾವ ಮೊತ್ತಕ್ಕೆ ಪ್ರತ್ಯೇಕವಾಗಿ ಜಾಬ್‌ಕೋಡ್‌ಗಳನ್ನು ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಪ್ರಸ್ತಾಪಿತ ವಿಷಯದಲ್ಲಿ ಸಮಿತಿಯು ದಿನಾಂಕ: 13-10-2017 ರಂದು ನಡೆದ ಸಭೆಯಲ್ಲಿ ವಿಷಯ ಸಂಖ್ಯೆ: ತೆಆಸ್ಥಾಸ/138/2017-18ರಲ್ಲಿ ಸುಮೋಟೋ ನಿರ್ಣಯವನ್ನು ಕೈಗೊಂಡಿರುವುದರಿಂದ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.**

***06]. ವಿಷಯದ ಸಂಖ್ಯೆ: ತೆಆಸ್ಥಾಸ/ 180 /2017-18***

ಪ್ರಧಾನ ಅಭಿಯಂತರರರ ದಿನಾಂಕ: 30-11-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮುಖ್ಯ ಅಭಿಯಂತರರು (ದಾಸರಹಳ್ಳಿ) ರವರು ಕಂಡಿಕೆ (05) ರಲ್ಲಿ ಕಾಮಗಾರಿಯಾದ Providing man power wupply to the Dasarahalli zonal control room ಗೆ ಒಂದು ವರ್ಷ ಅವಧಿಗೆ ಹಾಲಿ ಇರುವ Labour Department minium wages Act ಪ್ರಕಾರ ದರಗಳನ್ನು ಅಳವಡಿಸಿ ಅಗತ್ಯವಿರುವ man power ಗಳಿಗೆ ಅಂದಾಜು ಪಟ್ಟಿಯನ್ನು ರೂ.28.00 ಲಕ್ಷಗಳಿಗೆ ತಯಾರಿಸಿದ್ದು ಲೆಕ್ಕಶೀರ್ಷಿಕೆ-3156ರ ಅಡಿ ಜಬ್‌ಸಂಖ್ಯೆ ನೀಡಲು ಕೋರಿರುತ್ತಾರೆ. ಈ ವಿಚಾರದಲ್ಲಿ ಮುಖ್ಯ ಆರ್ಥಿಕ ಲೆಕ್ಕಾಧಿಕಾರಿರವರು ಕಂಡಿಕೆ (11) ರಲ್ಲಿ 2017-18ನೇ ಸಾಲಿನ ಆಯವ್ಯಯದ ಲೆಕ್ಕಶೀಷಿಕೆ-3156ರ ಅಡಿಯಲ್ಲಿ ಸದರಿ ಕಾಮಗಾರಿಯ ಮೊತ್ತ ರೂ.28.00 ಲಕ್ಷಗಳಿಗೆ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ವರದಿ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರು ಆದೇಶಿಸಿದಂತೆ ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ-3156 (Maintenance of control rooms in all zones) ರ ಅಡಿಯಲ್ಲಿ ರೂ.28.00 ಲಕ್ಷಗಳ ಮೊತ್ತವನ್ನು ಮರುಹೊಂದಾಣಿಕೆ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**-ಮುಂದೂಡಿದೆ-**

***07]. ವಿಷಯದ ಸಂಖ್ಯೆ: ತೆಆಸ್ಥಾಸ/ 181 /2017-18***

ಪ್ರಧಾನ ಅಭಿಯಂತರರರ ದಿನಾಂಕ: 30-11-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್-108 ವ್ಯಾಪ್ತಿಯಲ್ಲಿ ಕಾಮಗಾರಿಯಾದ Providing tools, plants, machinery and man power for demolition of deviated protions of the building constructed at site no 87 (old no 113) 3rd main road 4th block Rajajinagara-ಗೆ ಈಗಾಗಲೇ ವಲಯದ ಅಧಿಕಾರಿಗಳು ಕೆ.ಎಂ.ಸಿ. ಕಾಯ್ದೆ 1976 ಪ್ರಕಾರ ಕಲಂ 321(1), 321(2)ರ ಅನ್ವಯ ಹೊರಡಿಸಿರುವ ನೋಟೀಸ್ ಸಂಖ್ಯೆ: 3/15-16, ದಿ:29-04-2015 ಮತ್ತು ಸೆಕ್ಷನ್ 321(3)ರ ಪ್ರಕಾರ ಹೊರಡಿಸಿರುವ ಸ್ಥಿರೀಕರಣ ಆದೇಶ ಸಂಖ್ಯೆ:3/15-16, ದಿ:11-05-2015ರಲ್ಲಿ ನೀಡಲಾಗಿರುತ್ತದೆ. ನಂತರ ಕಾರ್ಯಪಾಲಕ ಅಭಿಯಂತರರು (ರಾಜಾಜಿನಗರ) ರವರು ಸೆಕ್ಷನ್ 462ರ ಅಡಿ ಕಾರ್ಯಕಾರಿ ಆದೇಶ ಸಂಖ್ಯೆ:7/16-17, ದಿ:17-02-2017 ರಂದು ಜಾರಿ ಮಾಡಿದ್ದು, ಸದರಿ ಸ್ವತ್ತಿನಲ್ಲಿ ನಿರ್ಮಿಸಿರುವ ಕಟ್ಟಡದಲ್ಲಿ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಲು ಅಂದಾಜು ಪಟ್ಟಿಯನ್ನು 2016-17ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರಗಳನ್ನು ಅಳವಡಿಸಿ ರೂ.548766.00 ಗಳಿಗೆ ತಯಾರಿಸಿದ್ದು, ಲೆಕ್ಕಶೀರ್ಷಿಕೆ-0055ರ ಅಡಿಯಲ್ಲಿ ಜಾಬ್‌ಸಂಖ್ಯೆಯನ್ನು ನೀಡಲು ವರದಿ ಸಲ್ಲಿಸಿರುತ್ತಾರೆ. ಮುಖ್ಯ ಆರ್ಥಿಕ ಲೆಕ್ಕಾಧಿಕಾರಿರವರು ಕಂಡಿಕೆ (10) ರಲ್ಲಿ 2017-18ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ-0055ರ ಅಡಿಯಲ್ಲಿ ಸದರಿ ಕಾಮಗಾರಿಯ ಮೊತ್ತ ರೂ.548766.00 ಲಕ್ಷಗಳಿಗೆ ಅಗತ್ಯವಿರುವ ಮೊತ್ತವು ಕೊರತೆ ಇರುವುದಾಗಿ ಹಾಗೂ ಸಮಿತಿಯ ಮುಂದೆ ಮಂಡಿಸಲು ವರದಿ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರು ಆದೇಶಿಸಿದಂತೆ ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ-0055 (Encroachment clearance

express **(Demolition charges)** ರ ಅಡಿಯಲ್ಲಿ ರೂ.548766.00 ಲಕ್ಷಗಳ ಮೊತ್ತವನ್ನು ಮರುಹೊಂದಾಣಿಕೆ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಪ್ರಧಾನ ಅಭಿಯಂತರರರ ದಿನಾಂಕ: 30–11–2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***08]. ವಿಷಯದ ಸಂಖ್ಯೆ: ತೆಆಸ್ಥಾಸ/ 193 /2017–18***

ಪ್ರಧಾನ ಅಭಿಯಂತರರರ ದಿನಾಂಕ: 18–12–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆ ವ್ಯಾಪ್ತಿಯ ತಗ್ಗು ಪ್ರದೇಶಗಳಲ್ಲಿ ಮಳೆಗಾಲದ ಸಂದರ್ಭದಲ್ಲಿ ಮಳೆ ನೀರಿನಿಂದ ಜಲಾವೃತವಾಗಿ ಸಾರ್ವಜನಿಕ ಜೀವನಕ್ಕೆ ಸಾಕಷ್ಟು ಕಷ್ಟಗಳನ್ನು ಮತ್ತು ಪ್ರಾಣಹಾನಿ ಸಂಭವಿಸುವುದನ್ನು ಗಮನಿಸಲಾಗಿದೆ. ದಿ:14.08.2017 ರಂದು ರಾತ್ರಿ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅತೀ ಹೆಚ್ಚು ಮಳೆ ಆಗಿದ್ದರಿಂದ ಕೋರಮಂಗಲದ ಎಸ್.ಟಿ.ಬೆಡ್, ಹೆಚ್.ಎಸ್.ಆರ್.ಲೇಔಟ್, ಮಹದೇವಪುರ, ಶಾಂತಿನಗರ ಹಾಗೂ ಬೊಮ್ಮನಹಳ್ಳಿ ವ್ಯಾಪ್ತಿಯ ತಗ್ಗು ಪ್ರದೇಶಗಳಲ್ಲಿ ಸುಮಾರು 5 ಅಡಿಗಳಷ್ಟು ನೀರು ನಿಂತ್ತಿದ್ದು, ನಿಂತ್ತಿರುವ ನೀರನ್ನು ಅತೀ ಜರೂರಾಗಿ ತೆರವುಗೊಳಿಸದೇ ಸಾರ್ವಜನಿಕರು ನಿಂತ ನೀರಿನಲ್ಲಿಯೇ ಸುಮಾರು 3 ರಿಂದ 4 ದಿನಗಳ ತನಕ ಸಾರ್ವಜನಿಕರು ಕಷ್ಟವನ್ನು ಅನುಭವಿಸಬೇಕಾಯಿತು. ಬೆಂಗಳೂರು ನಗರಾಭಿವೃದ್ಧಿ ಸಚಿವರು ಹಾಗೂ ಪೂಜ್ಯ ಮಹಾಪೌರರು ಸದರಿ ಪ್ರದೇಶಗಳ ಪರಿವೀಕ್ಷಣಾ ಸಮಯದಲ್ಲಿ ಜಲಾವೃತಗೊಂಡ ತಗ್ಗು ಪ್ರದೇಶಗಳಲ್ಲಿ ಸಾರ್ವಜನಿಕರು ಅನುಭವಿಸಿದ ಕಷ್ಟದಿಂದ ಸದರಿ ಪ್ರದೇಶಗಳ ನಾಗರೀಕರಿಂದ ಸಾಕಷ್ಟು ಆಕ್ರೋಶವನ್ನು ಎದುರುರಿಸಿದ್ದು ಗಮನಿಸಲಾಗಿದೆ.

ಈ ಹಿನ್ನಲೆಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಹೆಚ್ಚುವರಿ ಅಶ್ವಶಕ್ತಿ ಡಿಸಲ್ ಪಂಪ್ ಹೊಂದಿದಲ್ಲಿ ದಿ:14–08–2017 ರಂದು ಜಲಾವೃತ ಪ್ರದೇಶದಿಂದ ನೀರನ್ನು ಅತೀ ಶೀಘ್ರವಾಗಿ ತೆರವುಗೊಳಿಸಿ ಸಾರ್ವಜನಿಕ ಜೀವನಕ್ಕೆ ಅನಾನುಕೂಲವಾಗುವುದನ್ನು ತಪ್ಪಿಸಬಹುದಾಗಿತ್ತು. ಈ ಕ್ರಮದಿಂದ ಪಾಲಿಕೆಗೆ ಸಾರ್ವಜನಿಕರಿಂದ ಪ್ರಶಂಶೆಗೆ ಅರ್ಹರಾಗುವ ಸಾಧ್ಯತೆಯಿತ್ತು.

ಈ ಹಿನ್ನಲೆಯಲ್ಲಿ ಮುಂದಿನ ದಿನಗಳಲ್ಲಿ ಮಳೆಯಿಂದ ಪಾಲಿಕೆಯ ತಗ್ಗು ಪ್ರದೇಶಗಳಲ್ಲಿ ಹಾಗೂ ಮಳೆ ನೀರಿನ ಚರಂಡಿಯ ಆಸುಪಾಸಿನಲ್ಲಿ ಜಲಾವೃತಗೊಂಡಲ್ಲಿ ಅತೀ ಜರೂರಾಗಿ ಮಳೆ ನೀರನ್ನು ತೆರವುಗೊಳಿಸಲು ಮೆ॥ Aryan Pump and Enviro Solutions Pvt ltd. ರವರು ನೀರಿನಿಂದ ಜಲಾವೃತಗೊಂಡ ಪ್ರದೇಶದಿಂದ ನೀರನ್ನು ತೆರವುಗೊಳಿಸಲು ಹೆಚ್ಚುವರಿ ಅಶ್ವಶಕ್ತಿಯ ಡೀಸಲ್ ಪಂಪ್‌ನ್ನು (Auto Prime Trash Pump set model AT-6000) ನಮೂನೆಯ ಪಂಪ್‌ನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದು, ಸದರಿ ಪಂಪ್‌ನಿಂದ ಜಲಾವೃತಗೊಂಡ ಪ್ರದೇಶದಿಂದ ನೀರನ್ನು ಸರಾಗವಾಗಿ ತೆರವುಗೊಳಿಸಬಹುದಾಗಿರುತ್ತದೆ. ಸದರಿ ಪಂಪ್‌ನಿಂದ ಪ್ರತಿ ನಿಮಿಷಕ್ಕೆ ಸುಮಾರು 6000 ಲೀಟರ್‌ಗಳಷ್ಟು ನೀರನ್ನು ತೆರವುಗೊಳಿಸಬಹುದಾಗಿರುತ್ತದೆ.

ಸದರಿ ಕಂಪನಿಯ ಡೀಸಲ್ ಪಂಪ್‌ನ್ನು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆ ವಿಭಾಗದವರು ಮೆ॥.Aryan Pump and Enviro Solutions Pvt ltd. ರವರಿಂದ ಟೆಂಡರ್ ಮುಖೇನ 06 ಡೀಸಲ್ ಪಂಪ್‌ಗಳನ್ನು ರೂ.102.00 ಲಕ್ಷಗಳಿಗೆ ಖರೀದಿಸಿದ್ದು, ಕಾರ್ಯದೇಶದ ಪ್ರತಿಯನ್ನು ತಮ್ಮ ಅವಗಾಹನೆಗಾಗಿ ಕಡತದಲ್ಲಿ ಲಗತ್ತಿಸಿದೆ.

ಸದರಿ ಡೀಸಲ್ ಪಂಪ್‌ನ್ನು ಖರೀದಿಸುವುದರಿಂದ ಪಾಲಿಕೆಗೆ ಮುಂದಿನ ದಿನಗಳಲ್ಲಿ ಜಲಾವೃತಗೊಂಡ ಪ್ರದೇಶದಿಂದ ಮಳೆ ನೀರನ್ನು ತೆರವುಗೊಳಿಸಲು ಸುಲಭ ಸಾಧ್ಯವಾಗುವುದರಿಂದ ಪಾಲಿಕೆಯ ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ಬೊಮ್ಮನಹಳ್ಳಿ ವಲಯಗಳಲ್ಲಿ ಒಟ್ಟು 04 ಪಂಪ್‌ಗಳನ್ನು ಖರೀದಿಸಿ ಸಂಬಂಧಪಟ್ಟ ವಲಯದ ನಿಯಂತ್ರಣಾ ಕೋಠಡಿಯ ಸುಪರ್ಧಿಗೆ ನೀಡಿದಲ್ಲಿ ಆಯಾ ಪ್ರದೇಶಗಳಲ್ಲಿ ಮಳೆ ನೀರಿನಿಂದ ಆಗುವ ಅನಾಹುತವನ್ನು ತಪ್ಪಿಸಬಹುದಾಗಿರುತ್ತದೆ.

ಮೆ॥.Aryan Pump and Enviro Solutions Pvt ltd. ರವರು ಸದರಿ ಪಂಪ್‌ಗೆ ರೂ.16.90 ಲಕ್ಷಗಳ ಅಂದಾಜು ಸಲ್ಲಿಸಿದ್ದು, 04 ಪಂಪ್‌ಗಳಿಗೆ ಒಟ್ಟು ಮೊತ್ತ ರೂ.70.00 ಲಕ್ಷಗಳಿಗೆ ಕಾಮಗಾರಿ ಸಂಕೇತವನ್ನು 2017–18ನೇ ಸಾಲಿನ ಮಾನ್ಯ ಆಯುಕ್ತರವರ ವಿವೇಚನೆ ಅಡಿ ನಿಗಧಿಪಡಿಸಿರುವ ಅನುದಾನದ ಲೆಕ್ಕಶೀರ್ಷಿಕೆ ಅಡಿಯಲ್ಲಿ ಜಾಬ್‌ಕೋಡ್ ನೀಡಲು ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳಿಗೆ ಕೋರಿದ್ದು ಸದರಿಯವರ ಅಭಿಪ್ರಾಯದಂತೆ 2017–18ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–0541 ಅಡಿಯಲ್ಲಿ ಅನುದಾನ ಲಭ್ಯವಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

ಈ ಹಿನ್ನಲೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರು ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರ ಆದೇಶದಂತೆ ಈ ಕೆಳಕಂಡ ಅಂಶಕ್ಕೆ ಸೂಕ್ತ ನಿರ್ಣಯ ಕೋರಿ ಮಂಡಿಸಲಾದ ಟಿಪ್ಪಣಿ.

ಮೆ॥.Aryan Pump and Enviro Solutions Pvt ltd. ರವರು ಸದರಿ ಪಂಪ್‌ಗೆ ರೂ.16.90 ಲಕ್ಷಗಳ ಅಂದಾಜು ಸಲ್ಲಿಸಿದ್ದು, 04 ಪಂಪ್‌ಗಳಿಗೆ ಒಟ್ಟು ಮೊತ್ತ ರೂ.70.00 ಲಕ್ಷಗಳಿಗೆ ಕಾಮಗಾರಿ ಸಂಕೇತವನ್ನು 2017–18ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–0541 ಅಡಿಯಲ್ಲಿ ಅನುದಾನ ಮರುಹೊಂದಾಣಿಕೆ ಮಾಡಿಕೊಂಡು ಜಾಬ್‌ಸಂಖ್ಯೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *09]. ವಿಷಯದ ಸಂಖ್ಯೆ: ತೆಆಸ್ಥಾಸ/ 195 /2017–18*

ಪ್ರಧಾನ ಅಭಿಯಂತರರರ ದಿನಾಂಕ: 22–12–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.125ರ ಸ್ವತ್ತಿನ ಸಂಖ್ಯೆ: 33, 17ನೇ ಅಡ್ಡರಸ್ತೆ, ವಿಜಯನಗರ, ಬೆಂಗಳೂರಿನ ಸ್ವತ್ತಿನ ಸಂಖ್ಯೆಯ ಮಾಲಿಕರು ಮಂಜೂರಾದ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಾಣ ಮಾಡಿದ್ದು, ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸುವ ಕಾಮಗಾರಿ ವೆಚ್ಚ ರೂ.7.25 ಲಕ್ಷಗಳಿಗೆ ಕಾಮಗಾರಿ ಸಂಕೇತ ನೀಡಲು ಕೋರಿದ್ದು ವಿವರಗಳು ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1 | Providing tools, plants, Machinary and Man power Demolition of deviated portions of building at site no.33 (old33/1733), 17th cross, MRCR layout, vijaya nagar, Bangalore in ward no.125 | 7.25 |
| | **Total:** | **7.25** |

ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳ ಅಭಿಪ್ರಾಯಿಸಿದಂತೆ, ಕೆ.ಎಂ.ಸಿ.ಕಾಯ್ದೆ 1976 ಸೆಕ್ಷನ್ 463(1) ಪ್ರಕಾರ ಅನಧಿಕೃತ/ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡ ಮಾಲೀಕರಿಂದಲೇ ವಸೂಲಿ ಮಾಡಿಕೊಳ್ಳಬೇಕಾಗಿದೆ. 2017–18ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–0055ರ ಅಡಿಯಲ್ಲಿ ಅನುದಾನ ಲಭ್ಯವಿರುವುದಿಲ್ಲ, ಅನುದಾನ ಕೊರತೆ ಇರುವುದರಿಂದ ಐ.ಎಫ್.ಎಂ.ಎಸ್.ತಂತ್ರಾಂಶದಲ್ಲಿ ಜಾಬ್ ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ.

ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರವರು ಆದೇಶಿಸಿದಂತೆ ಸದರಿ ಲೆಕ್ಕಶೀರ್ಷಿಕೆ ಪಿ–0055 ಅಡಿ ಮರುಹೊಂದಾಣಿಕೆ ಮಾಡಿಕೊಂಡು ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳುವ ಮತ್ತು ಸದರಿ ಕಟ್ಟಡದ ಅನಧಿಕೃತ/ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡ ಮಾಲೀಕರಿಂದಲೇ ವಸೂಲಿ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟು ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸುವ ಕಾಮಗಾರಿಯ ಅಂದಾಜು ಮೊತ್ತವಾದ ರೂ.7.25 ಲಕ್ಷಗಳಿಗೆ ಜಾಬ್‌ಕೋಡ್ ನೀಡಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಪ್ರಧಾನ ಅಭಿಯಂತರರರ ದಿನಾಂಕ: 22–12–2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *10]. ವಿಷಯದ ಸಂಖ್ಯೆ: ತೆಆಸ್ಥಾಸ/ 196 /2017–18*

ಪ್ರಧಾನ ಅಭಿಯಂತರರರ ದಿನಾಂಕ: 22–12–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಪಶ್ಚಿಮ ವಲಯಕ್ಕೆ ಸೇರಿರುವ ಮಹಾಲಕ್ಷ್ಮೀಪುರಂ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ: 43 ರಲ್ಲಿ ಕೈಗೊಳ್ಳಬೇಕಾಗಿರುವ ಕಾಮಗಾರಿಗೆ, ಕಾಮಗಾರಿ ಸಂಕೇತ ನೀಡಲು ಕೋರಿದ್ದು ವಿವರಗಳು ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1 | Demoliltion of Sri.M.R.Anatha Kumar S/o Ranga Swamy site No.04, 2nd main road, Kanteeravanagara form, Nandini Layout, Bangalore-96 | 3.70 |
| | **Total:** | **3.70** |

ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳ ಅಭಿಪ್ರಾಯಿಸಿದಂತೆ, ಕೆ.ಎಂ.ಸಿ.ಕಾಯ್ದೆ 1976 ಸೆಕ್ಷನ್ 463(1) ಪ್ರಕಾರ ಅನಧಿಕೃತ/ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡ ಮಾಲೀಕರಿಂದಲೇ ವಸೂಲಿ ಮಾಡಿಕೊಳ್ಳುತ್ತಿರುವುದರಿಂದ, 2017–18ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–0055ರ ಅಡಿಯಲ್ಲಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗೆ ಸಲ್ಲಿಸಬೇಕಾಗಿರುತ್ತದೆಂದು ಅಭಿಪ್ರಾಯಿಸಿದ್ದು, ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರವರು ಆದೇಶಿಸಿದಂತೆ ಸದರಿ ಲೆಕ್ಕಶೀರ್ಷಿಕೆ ಪಿ–0055 ಅಡಿ ಮರುಹೊಂದಾಣಿಕೆ ಮಾಡಿಕೊಂಡು ಸದರಿ ಕಟ್ಟಡದ ಅನಧಿಕೃತ/ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡ ಮಾಲೀಕರಿಂದಲೇ ವಸೂಲಿ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟು ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸುವ ಕಾಮಗಾರಿಯ ಅಂದಾಜು ಮೊತ್ತವಾದ ರೂ.3.70 ಲಕ್ಷಗಳಿಗೆ ಜಾಬ್‌ಕೋಡ್ ನೀಡಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಪ್ರಧಾನ ಅಭಿಯಂತರರರ ದಿನಾಂಕ: 22–12–2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

### *11]. ವಿಷಯದ ಸಂಖ್ಯೆ: ತೆಆಸ್ಥಾಸ/ 197 /2017-18*

ಆಯುಕ್ತರ ದಿನಾಂಕ: 23-12-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ವೋದಯ ಸಂಸ್ಥೆ (ರಿ), ನಂ.324, 2ನೇ ಅಡ್ಡರಸ್ತೆ, 1ನೇ ಬ್ಲಾಕ್, 1ನೇ ಹಂತ, ಪೀಣ್ಯ, ಬೆಂಗಳೂರು-560058, ರವರಿಗೆ 2017-18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಪಿಕೋಡ್ 048ರ ಅಡಿಯಲ್ಲಿ ಮೊತ್ತ ರೂ.9.85 (ಒಂಭತ್ತು ಲಕ್ಷ ಎಂಭತ್ತೈದು ಸಾವಿರ) ಗಳನ್ನು ಸದರಿ ಸಂಸ್ಥೆಗೆ ಮಂಜೂರು ಮಾಡುವ ಬಗ್ಗೆ.

ಸರ್ವೋದಯ ಸಂಸ್ಥೆ (ರಿ), ಸಂಸ್ಥೆಯ ಜಾನಪದೋತ್ಸವ ಕಾರ್ಯಕ್ರಮಕ್ಕೆ ಸಹಾಯಧನ ಕೋರಿದ್ದು ಲೆಕ್ಕ ಶೀರ್ಷಿಕೆ 01-ಕೌನ್ಸಿಲ್ ಪಿ ಕೋಡ್ 048ರಲ್ಲಿ ಕೊಡುಗೆಗಳು ಮತ್ತು ಸಹಾಯಧನಗಳ ಅಡಿಯಲ್ಲಿ ಮೊತ್ತ ರೂ. 800.00 (ಎಂಟು ನೂರು) ಲಕ್ಷಗಳನ್ನು ಸಂಘ ಸಂಸ್ಥೆಗಳಿಗೆ ಮೀಸಲಿರಿಸಿದೆ. ಸದರಿ ಮೊತ್ತದಲ್ಲಿ 113 ಸಂಘ ಸಂಸ್ಥೆಗಳಿಗೆ 635.00 (ಆರು ನೂರು ಮೂವತ್ತೈದು) ಲಕ್ಷಗಳನ್ನು ಈಗಾಲೇ ನಿಗದಿಗೊಳಿಸಿದ್ದು ಉಳಿಕೆ ಮೊತ್ತ ರೂ.165.00 (ಒಂದು ನೂರು ಆರವತ್ತೈದು) ಲಕ್ಷಗಳಲ್ಲಿ 2016-17ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಕಡತಗಳಿಗೆ 2017-18ರ ಸಾಲಿನ ಅನುಮೋದಿತ ಅಯವ್ಯದಲ್ಲಿ ನೀಡುವಂತೆ ತೆರಿಗೆ ಆರ್ಥಿಕ ಸ್ಥಾಯಿ ಸಮಿತಿ ಅದ್ಯಕ್ಷರು ಸೂಚಿಸಿರುತ್ತಾರೆ. 2017-18ರ ಲೆಕ್ಕಶೀರ್ಷಿಕೆ ಆಯವ್ಯಯದಲ್ಲಿ ಸದರಿ ಸಂಸ್ಥೆಯ ಹೆಸರು ಇಲ್ಲದಿರುವುದನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ಸಂಸ್ಥೆಯವರಿಗೆ ಸಹಾಯಧನ ಮಂಜೂರು ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2017-18ನೇ ಸಾಲಿನಲ್ಲಿ ಆಯವ್ಯಯದಲ್ಲಿ ಅನುದಾನ ಲಭ್ಯತೆ ಇಲ್ಲದೆ ಇರುವುದರಿಂದ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.**

### *12]. ವಿಷಯದ ಸಂಖ್ಯೆ: ತೆಆಸ್ಥಾಸ/ 199 /2017-18*

ಆಯುಕ್ತರ ದಿನಾಂಕ: 14-12-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ಆರ್ಥಿಕ ಇಲಾಖೆಯು ರಾಜ್ಯ ಸರ್ಕಾರಿ ನೌಕರರುಗಳಿಗೆ 2012ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ 1ನೇ ಜುಲೈ 2017 ರಿಂದ ಜಾರಿಗೆ ಬರುವಂತೆ ತುಟ್ಟಿಭತ್ಯೆಯ ದರವನ್ನು ಮೂಲ ವೇತನದ ಶೇಕಡ 43.25 ರಿಂದ ಶೇಕಡ 45.25ಕ್ಕೆ ಹೆಚ್ಚಿಸಿ ಹಾಗೂ ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರು / ಕುಟುಂಬ ನಿವೃತ್ತಿ ವೇತನದಾರರಿಗೆ ಮತ್ತು ರಾಜ್ಯದ ಸಂಚಿತ ನಿಧಿಯಿಂದ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಪಡೆಯುತ್ತಿರುವಂತಹ ಅನುದಾನಿತ ಶಿಕ್ಷಣ ಸಂಸ್ಥೆಗಳ ನಿವೃತ್ತಿ ವೇತನದಾರರು / ಕುಟುಂಬ ನಿವೃತ್ತಿ ವೇತನದಾರರಿಗೆ ಹಾಲಿ ಲಭ್ಯವಿರುವ ತುಟ್ಟಿಭತ್ಯೆಯ ದರವನ್ನು ಮೂಲ ನಿವೃತ್ತಿ ವೇತನ / ಕುಟುಂಬ ನಿವೃತ್ತಿ ವೇತನದ ಶೇಕಡ 43.25 ರಿಂದ ಶೇಕಡ 45.25ಕ್ಕೆ ಹೆಚ್ಚಿಸಿ ದಿನಾಂಕ: 01-07-2017 ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಲಾಗಿರುತ್ತದೆ.

ಈ ಹಿಂದೆ ಸರ್ಕಾರವು ತುಟ್ಟಿಭತ್ಯೆಯನ್ನು ಹೆಚ್ಚಿಸುವ ಆದೇಶವನ್ನು ನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ಸದರಿ ಟಿಪ್ಪಣಿಗೆ ಸಂಬಂಧಿಸಿದಂತೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯ ಸಂಖ್ಯೆ: ತೆಆಸ್ಥಾಸ/05/2014-15ರಲ್ಲಿ ದಿನಾಂಕ: 02.11.2015 ರಂದು ನಡೆದ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯವನ್ನು ತೆಗೆದುಕೊಳ್ಳಲಾಗಿರುತ್ತದೆ.

"ಸರ್ಕಾರಿ ಆದೇಶದ ಅನುಸಾರ ಕಾಲಕಾಲಕ್ಕೆ ತುಟ್ಟಿಭತ್ಯೆಯನ್ನು ಪಾವತಿಸುವುದು ಕಡ್ಡಾಯವಾಗಿರುವ ಹಿನ್ನೆಲೆಯಲ್ಲಿ ಪಾಲಿಕೆಯ ಖಾಯಂ ನೌಕರರಿಗೆ ಮತ್ತು ಪಿಂಚಣಿದಾರರಿಗೆ ಅನ್ವಯವಾಗುವಂತೆ ಅಳವಡಿಸಿಕೊಂಡು ಪಾವತಿಸುವುದು ಹಾಗು ಇನ್ನು ಮುಂದೆ ಕಾಲಕಾಲಕ್ಕೆ ಸರ್ಕಾರದ ಆದೇಶದನ್ವಯ ನೀಡಲಾಗುವ ತುಟ್ಟಿಭತ್ಯೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಂಡು ಪಾವತಿಸಿದ ನಂತರ ದಾಖಲಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು" ತೀರ್ಮಾನಿಸಲಾಗಿರುತ್ತದೆ.

ಇದರಂತೆ, ಹಾಗೂ ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ39ಎಸ್‌ಆರ್‌ಪಿ 2017, ದಿನಾಂಕ: 06.10.2017ರ ಕಛೇರಿ ಆದೇಶವನ್ನು ನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ. ಸದರಿ ಆದೇಶದ ದಾಖಲಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 14-12-2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***13]. ವಿಷಯದ ಸಂಖ್ಯೆ: ತೆಆಸ್ಥಾಸ/ 200 /2017-18***

ಆಯುಕ್ತರ ದಿನಾಂಕ: 15-12-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಆರ್.ವಿ.ದೇವರಾಜ್ ಸೇವಾ ಪ್ರತಿಷ್ಠಾನ (ರಿ), ನಂ.52, 'ಸಿ' ಸ್ಟ್ರೀಟ್, ಕೋಟೆ, (ವಾಣಿವಿಲಾಸ ಬಾಲಕಿಯರ ಪ್ರೌಢಶಾಲೆ ಹತ್ತಿರ), ಬೆಂಗಳೂರು-560002, ರವರಿಗೆ 2017-18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್ ಕೋಡ್ 048, ಅನುಬಂಧ-03ರಲ್ಲಿ ಕ್ರಮಸಂಖ್ಯೆ 32ರಲ್ಲಿ ಮೊತ್ತ ರೂ.10.00 (ಹತ್ತು) ಲಕ್ಷಗಳನ್ನು ಸದರಿ ಸಂಸ್ಥೆಗೆ ಮೀಸಲಿರಿಸಲಾಗಿರುತ್ತದೆ.

ಈ ಸಂಬಂಧವಾಗಿ ಆರ್.ವಿ. ದೇವರಾಜ್ ಸೇವಾ ಪ್ರತಿಷ್ಠಾನ (ರಿ) ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ಅನುಮೋದಿತ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ ರೂ.10.00 (ಹತ್ತು) ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 15-12-2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***14]. ವಿಷಯದ ಸಂಖ್ಯೆ: ತೆಆಸ್ಥಾಸ/ 202 /2017-18***

ಪ್ರಧಾನ ಅಭಿಯಂತರರರ ದಿನಾಂಕ: 27-12-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮುಖ್ಯ ಅಭಿಯಂತರರು (ಪಶ್ಚಿಮ) ರವರು ವಾರ್ಡ್ ನಂ.109ರಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಗಣೇಶ ವಿಸರ್ಜನೆ ಕಾರ್ಯಕ್ರಮಕ್ಕಾಗಿ ಸಂಬಂಧಪಟ್ಟಂತೆ ಗುರುತಿಸಿರುವ ಸ್ಥಳದಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಇದರ ವಿವರಗಳು ಈ ಕೆಳಕಂಡಂತಿರುತ್ತದೆ.

| Sl. No | Ward No | Name of work | Est cost Rs. |
|---|---|---|---|
| 1 | 109 | Supply of 10 wheeler tipper and water for the immersion of Ganesha Idols at Avenue road at mysore bank circle | 80,000.00 |

ಗಾಂಧಿನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ವಾರ್ಡ್ 109 ರಲ್ಲಿ ಗುರುತಿಸಲಾಗಿದ್ದು, ಗಣೇಶ ವಿಗ್ರಹಗಳನ್ನು ವಿಸರ್ಜಿಸಲು ದೊಡ್ಡ ಲಾರಿಯನ್ನು ಪ್ಲಾಸ್ಟಿಕ್ ಕವರ್ ಅಳವಡಿಸಿ, ನೀರು ತುಂಬಿಸಿ

ವಿಸರ್ಜನೆ ಕಾರ್ಯಗಳನ್ನು ಕೈಗೊಂಡಿದ್ದು ಹಾಗೂ ನಾಗರೀಕರಿಗೆ ಅನುಕೂಲ ಮಾಡಲು ಕ್ರಮಗಳನ್ನು ಕೈಗೊಳ್ಳಲು ಅಂದಾಜು ಪಟ್ಟಿಯನ್ನು 2016–17ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರಗಳನ್ನು ಅಳವಡಿಸಿ ರೂ.80,000.00 ಗಳಿಗೆ ತಯಾರಿಸಲಾಗಿರುತ್ತದೆ. ಈ ಕಾರ್ಯವನ್ನು ಕೊಟೇಷನ್ ಮುಖಾಂತರ ಗುತ್ತಿಗೆದಾರರನ್ನು ನಿಗಧಿಪಡಿಸಿ ಡಿ.ಸಿ.ಬಿಲ್ಲಿನ ಮೂಲಕ ಪಾವತಿಸಲು ಅನುಮೋದನೆ ಕೋರಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿರವರು ಕಂಡಿಕೆ (12) ರಲ್ಲಿ ಗಣೇಶ ವಿಗ್ರಹಗಳನ್ನು ವಿಸರ್ಜನೆ ಮಾಡುವ ಕಾಮಗಾರಿಯನ್ನು 2017–18ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–3155 (ಇಮ್ಮರ್ಷನ್ ಆಫ್ ಗಣೇಶ ಐಡಲ್ಸ್) ಪುಟ 89ರಲ್ಲಿ ರೂ.100.00 ಲಕ್ಷಗಳನ್ನು ಅನುವು ಮಾಡಲಾಗಿದ್ದು ಈಗ ಅನುದಾನವು ಲಭ್ಯವಿಲ್ಲವೆಂದು ಮತ್ತು ಕೊರತೆ ಅನುದಾನವಾದ ರೂ.80,000.00 ಮೊತ್ತವನ್ನು ಅಳವಡಿಸಲು ಸಮಿತಿಯ ಅನುಮೋದನೆಯೊಂದಿಗೆ ಕ್ರಮವಹಿಸಬಹುದಾಗಿದೆ ಎಂದು ಅಭಿಪ್ರಾಯ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರು ಆದೇಶಿಸಿದಂತೆ ವಾರ್ಡ್–109 ರಲ್ಲಿ ಗಣೇಶ ವಿಸರ್ಜನಾ ಕಾರ್ಯಕ್ರಮಕ್ಕೆ ಕಾಮಗಾರಿಯಾದ Supply of 10 wheeler tipper and water for the immersion of Ganesha Idols at Avenue road at mysore bank circle ಗೆ ಕೊರತೆ ಅನುದಾನ ಮೊತ್ತವಾದ ರೂ.80,000.00 ಗಳನ್ನು ಅಳವಡಿಸಿಕೊಳ್ಳಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಪ್ರಧಾನ ಅಭಿಯಂತರರ ದಿನಾಂಕ: 27–12–2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

### ***15]. ವಿಷಯದ ಸಂಖ್ಯೆ: ತೆಆಸ್ಥಾಸ/ 205 /2017–18***

ಪ್ರಧಾನ ಅಭಿಯಂತರರ ದಿನಾಂಕ: 26–12–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಜ್ಞಾನನಗರ ವಾರ್ಡ್ ಸಂಖ್ಯೆ: 81 ಹೆಚ್.ಎ.ಎಲ್. ಏರ್‌ಪೋರ್ಟ್ ಉಪ–ವಿಭಾಗದ ವ್ಯಾಪ್ತಿಯಲ್ಲಿ ಖಾತ ನಂ.4/3, ಮಹದೇವಪುರ ಗ್ರಾಮದಲ್ಲಿ ಶ್ರೀ.ಎಂ.ಎನ್.ಮಾಣೀಕ್ಯಲರಾಜು ರವರು ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಾಣ ಮಾಡಿದ್ದು, ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸುವ ಕಾಮಗಾರಿ ವೆಚ್ಚ ರೂ.4.50ಲಕ್ಷಗಳಿಗೆ ಕಾಮಗಾರಿ ಸಂಕೇತ ನೀಡಲು ಕೋರಿದ್ದು ವಿವರಗಳು ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1 | Estimate for providing tools, plants, machinery and man power for demolition of set back violation building of M.N.Manikyala Raju sy.No.4/3, Mahadevapura in ward no.81 | 4.50 |
| | **Total:** | **4.50** |

ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳ ಅಭಿಪ್ರಾಯಿಸಿದಂತೆ, ಕೆ.ಎಂ.ಸಿ.ಕಾಯ್ದೆ 1976 ಸೆಕ್ಷನ್ 463(1) ಪ್ರಕಾರ ಅನಧಿಕೃತ/ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡ ಮಾಲೀಕರಿಂದಲೇ ವಸೂಲಿ ಮಾಡಿಕೊಳ್ಳುತ್ತಿರುವುದರಿಂದ ಲೆಕ್ಕಶೀರ್ಷಿಕೆ ಪಿ–0055ರ ಅಡಿಯಲ್ಲಿ ಅನುದಾನವನ್ನು ಅಳವಡಿಸಿಕೊಂಡು

ರೂ.4.50 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಯಂತೆ ಕ್ರಮವಹಿಸಬೇಕಿದೆ ಎಂದು ತಿಳಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರವರು ಆದೇಶಿಸಿದಂತೆ ಸದರಿ ಲೆಕ್ಕಶೀರ್ಷಿಕೆ ಮರುಹೊಂದಾಣಿಕೆ ಮಾಡಿಕೊಂಡು ಸದರಿ ಕಟ್ಟಡದ ಅನಧಿಕೃತ/ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಮೇಲ್ಕಾಣಿಸಿದ ಕಟ್ಟಡ ಮಾಲೀಕರಿಂದಲೇ ವಸೂಲಿ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟು ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸುವ ಕಾಮಗಾರಿಯ ಅಂದಾಜು ಮೊತ್ತವಾದ ರೂ.4.50 ಲಕ್ಷಗಳಿಗೆ ಜಾಬ್‌ಕೋಡ್ ನೀಡಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**<u>-ಮುಂದೂಡಿದೆ-</u>**

## ***<u>16]. ವಿಷಯದ ಸಂಖ್ಯೆ: ತೆಆಸ್ಥಾಸ/ 206 /2017-18</u>***

ಪ್ರಧಾನ ಅಭಿಯಂತರರರ ದಿನಾಂಕ: 26-12-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಜ್ಞಾನನಗರ ವಾರ್ಡ್ ಸಂಖ್ಯೆ: 81 ಹೆಚ್.ಎ.ಎಲ್. ಏರ್‌ಪೋರ್ಟ್ ಉಪ-ವಿಭಾಗದ ಸೈಟ್ ನಂ. 15/1, 1ನೇ ಕ್ರಾಸ್, ರಾಮಾಂಜಿಪ್ಪ ಬಡಾವಣೆ, ಆಕಾಶನಗರದಲ್ಲಿ ಶ್ರೀ ಶೇಷಾರೆಡ್ಡಿ ರವರು ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಾಣ ಮಾಡಿದ್ದು, ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸುವ ಕಾಮಗಾರಿ ವೆಚ್ಚ ರೂ.4.50ಲಕ್ಷಗಳಿಗೆ ಕಾಮಗಾರಿ ಸಂಕೇತ ನೀಡಲು ಕೋರಿದ್ದು ವಿವರಗಳು ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1 | Estimate for providing tools, plants, machinery and man power for demolition of set back violation building of Sri. Shesha Reddy at site No.07, survey No.15/1, 1st cross, Ramanjinappa layout, Akash Nagar in ward no.81 | 4.50 |
| | **Total:** | **4.50** |

ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳ ಅಭಿಪ್ರಾಯಿಸಿದಂತೆ, ಕೆ.ಎಂ.ಸಿ.ಕಾಯ್ದೆ 1976 ಸೆಕ್ಷನ್ 463(1) ಪ್ರಕಾರ ಅನಧಿಕೃತ/ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡ ಮಾಲೀಕರಿಂದಲೇ ವಸೂಲಿ ಮಾಡಿಕೊಳ್ಳುತ್ತಿರುವುದರಿಂದ ಲೆಕ್ಕಶೀರ್ಷಿಕೆ ಪಿ-0055ರ ಅಡಿಯಲ್ಲಿ ಅನುದಾನವನ್ನು ಅಳವಡಿಸಿಕೊಂಡು ರೂ.4.50 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಯಂತೆ ಕ್ರಮವಹಿಸಬೇಕಿದೆ ಎಂದು ತಿಳಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರವರು ಆದೇಶಿಸಿದಂತೆ ಸದರಿ ಲೆಕ್ಕಶೀರ್ಷಿಕೆ ಮರುಹೊಂದಾಣಿಕೆ ಮಾಡಿಕೊಂಡು ಸದರಿ ಕಟ್ಟಡದ ಅನಧಿಕೃತ/ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಮೇಲ್ಕಾಣಿಸಿದ ಕಟ್ಟಡ ಮಾಲೀಕರಿಂದಲೇ ವಸೂಲಿ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟು ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸುವ ಕಾಮಗಾರಿಯ ಅಂದಾಜು ಮೊತ್ತವಾದ ರೂ.4.50 ಲಕ್ಷಗಳಿಗೆ ಜಾಬ್‌ಕೋಡ್ ನೀಡಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**<u>-ಮುಂದೂಡಿದೆ-</u>**

## *17]. ವಿಷಯದ ಸಂಖ್ಯೆ: ತೆಆಸ್ಥಾಸ/ 207 /2017-18*

ಪ್ರಧಾನ ಅಭಿಯಂತರರರ ದಿನಾಂಕ: 10-01-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಇ/199/ಎಸ್/ಎಫ್/ಸಿ/2016, ಬೆಂಗಳೂರು ದಿನಾಂಕ: 21-06-2016ರ ಆದೇಶದಲ್ಲಿ ನಗರೋತ್ಥಾನ ಮತ್ತು ವಿಶೇಷ ಮೂಲಭೂತ ಸೌಕರ್ಯ (Sip Project works) ಬಂಡವಾಳ ಯೋಜನೆಯಡಿ ಕಾಮಗಾರಿಗಳನ್ನು 2016-17 & 2017-18ನೇ ಸಾಲಿಗೆ ರೂ.7300.00 ಕೋಟಿಗಳ ಕ್ರಿಯಾ ಯೋಜನೆಗೆ ಸರ್ಕಾರ ಅನುಮೋದನೆ ನೀಡಿದೆ.

- ಮೇಲ್ಕಂಡ ಸರ್ಕಾರದ ಅನುಮೋದಿತ ಕ್ರಿಯಾ ಯೋಜನೆಗಳ ಪೈಕಿ 110 ಹಳ್ಳಿಗಳ ಅಭಿವೃದ್ಧಿಗಾಗಿ ರೂ.250.00 ಕೋಟಿಗಳ ಅನುದಾನ ನಿಗಧಿಪಡಿಸಿದೆ. ಸದರಿ ರೂ.250.00 ಕೋಟಿಗಳ ಅನುದಾನವನ್ನು 2016-17ನೇ ಸಾಲಿಗೆ ಮೀಸಲಿರಿಸಿದೆ.

| ಕ್ರಮ ಸಂಖ್ಯೆ | ವಿಧಾನಸಭಾ ಕ್ಷೇತ್ರ | ಅನುದಾನ (ಕೋಟಿಗಳಲ್ಲಿ) |
|---|---|---|
| 01 | ಕೆ.ಆರ್. ಪುರಂ | 40.00 |
| 02 | ಯಶವಂತಪುರ | 40.00 |
| 03 | ರಾಜರಾಜೇಶ್ವರಿನಗರ | 40.00 |
| 04 | ಬ್ಯಾಟರಾಯನಪುರ | 40.00 |
| 05 | ಬೆಂಗಳೂರು ದಕ್ಷಿಣ | 15.00 |
| 06 | ಯಲಹಂಕ | 10.00 |
| 07 | ಮಹದೇವಪುರ | 15.00 |
| 08 | ದಾಸರಹಳ್ಳಿ | 25.00 |
| 09 | ಸರ್ವಜ್ಞನಗರ | 25.00 |
| 10 | ಬೊಮ್ಮನಹಳ್ಳಿ | 15.00 |
| | **ಒಟ್ಟು** | **250.00** |

- 110 ಹಳ್ಳಿಗಳ ಅಭಿವೃದ್ಧಿಗಾಗಿ ನಿಗಧಿಪಡಿಸಿರುವ ರೂ.250.00 ಕೋಟಿ ಅನುದಾನದಲ್ಲಿ 2016-17ನೇ ಸಾಲಿನಲ್ಲಿ ಕೆ.ಆರ್.ಪುರಂ, ಯಶವಂತಪುರ, ರಾಜರಾಜೇಶ್ವರಿನಗರ, ಸರ್ವಜ್ಞನಗರ, ಬೆಂಗಳೂರು ದಕ್ಷಿಣ, ಯಲಹಂಕ, ಮಹದೇವಪುರ, ದಾಸರಹಳ್ಳಿ, ಬೊಮ್ಮನಹಳ್ಳಿ ಒಟ್ಟು ಮೊತ್ತ ರೂ.210.00 ಕೋಟಿಗಳ ಕ್ರಿಯಾ ಯೊಜನೆಗೆ ಸರ್ಕಾರ ಅನುಮೋದನೆ ನೀಡಿದ್ದು, ಜಾಬ್‌ಸಂಖ್ಯೆ ನೀಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ನಇ175ಎಸ್‌ಎಫ್‌ಸಿ216, ಬೆಂಗಳೂರು. ದಿನಾಂಕ: 11.12.2017ರಲ್ಲಿ ಉಳಿದ ಬ್ಯಾಟರಾಯನಪುರ ಕ್ಷೇತ್ರದ ರೂ.40.00 ಕೋಟಿಗಳ ಕ್ರಿಯ ಯೊಜನೆಗೆ ಅನುಮೋದನೆ ನೀಡಿದೆ.
- ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ರೂ.40.00 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ.

2017-18ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3158 Sip Project works ಅಡಿ ರೂ.6706.00 ಲಕ್ಷಗಳ ಅನುದಾನ ಮೀಸಲಿರಿಸಿದೆ. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯ ನಡವಳಿಗಳು ವಿಷಯದ ಸಂಖ್ಯೆ ತೆ.ಆ.ಸ್ಥಾ.ಸ/63/2017-18, ದಿನಾಂಕ: 07.08.2017ರಲ್ಲಿ ಲೆಕ್ಕಶೀರ್ಷಿಕೆ ಪಿ-3158

ಚಾಲ್ತಿ ಕಾಮಗಾರಿಗಳ ಅಡಿ ಮೀಸಲಿಟ್ಟಿರುವ ರೂ.6706.00 ಲಕ್ಷಗಳ ಅನುದಾನವನ್ನು ರೂ.3006.00 ಲಕ್ಷಗಳಿಗೆ ಮಿತಿಗೊಳಿಸಿ ತೀರ್ಮಾನ ಕೈಗೊಂಡಿರುತ್ತದೆ. ಯಶವಂತಪುರ ವಿಧಾನಸಭಾಕ್ಷೇತ್ರದ ರೂ.3000.00 ಲಕ್ಷಗಳಿಗೆ ಸರ್ಕಾರದಿಂದ ಅನುದಾನ ಬಿಡುಗಡೆಗೊಂಡ ನಂತರ ಅನುಷ್ಠಾನಗೊಳಿಸುವ ಷರತ್ತಿಗೆ ಒಳಪಡಿಸಿ ಜಬ್‌ಸಂಖ್ಯೆ ನೀಡಲು ಮಾನ್ಯ ಆಯುಕ್ತರು ಆದೇಶಿಸಿರುವ ಮೇರೆಗೆ ಜಾಬ್‌ಸಂಖ್ಯೆ ನೀಡಲಾಗಿದ್ದು, 2017–18ರ ಆಯವ್ಯಯದಲ್ಲಿ ಪಿ–3158 ಅಡಿ ಅನುದಾನ ಲಭ್ಯವಿರುವುದಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ/199/ಎಸ್.ಎಫ್.ಸಿ/ 2016, ಬೆಂಗಳೂರು ದಿನಾಂಕ: 21.06.2016ರ ಆದೇಶದಲ್ಲಿ ನಗರೋತ್ಥಾನ ಮತ್ತು ವಿಶೇಷ ಮೂಲಭೂತ ಸೌಕರ್ಯ (Sip Project works) ಬಂಡವಾಳ ಯೋಜನೆಯಡಿ ಕಾಮಗಾರಿಗಳನ್ನು 2016–17 & 2017–18ನೇ ಸಾಲಿಗೆ ರೂ.7300.00 ಕೋಟಿಗಳ ಕ್ರಿಯಾ ಯೋಜನೆಗೆ ಸರ್ಕಾರ ಅನುಮೋದನೆ ನೀಡಿದೆ. 2017–18ನೇ ಪಿ–3158 ಅಡಿ ಅನುದಾನ ಲಭ್ಯವಿಲ್ಲದಿರುವುದ್ದರಿಂದ, IFMS ನಲ್ಲಿ ಜಾಬ್‌ಸಂಖ್ಯೆ ನೀಡಲು ಅನುದಾನ ಕೊರತೆ ಇರುತ್ತದೆ. ಸದರಿ ಪ್ರಸ್ತಾವನೆಯ ಮೊತ್ತ ರೂ.40.00 ಕೋಟಿಗಳ ಅನುದಾನವನ್ನು ಪಿ–3158 ಅಡಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಪ್ರಧಾನ ಅಭಿಯಂತರರರ ದಿನಾಂಕ: 10–01–2018ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***18]. ವಿಷಯದ ಸಂಖ್ಯೆ: ತೆಆಸ್ಥಾಸ/ 208 /2017–18***

ಆಯುಕ್ತರ ದಿನಾಂಕ: 02–01–2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಲೋಕಮಾನ್ಯ ಸೇವಾ ಟ್ರಸ್ಟ್ (ರಿ), ನಂ.832, 1ನೇ ಮಹಡಿ, 5ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಮಹಾಲಕ್ಷ್ಮೀಪುರಂ, ಬೆಂಗಳೂರು–560056, ರವರಿಗೆ 2017–18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಪಿಕೋಡ್ 048, ಮೊತ್ತ ರೂ.10.00 (ಹತ್ತು) ಲಕ್ಷಗಳನ್ನು ಸದರಿ ಸಂಸ್ಥೆಗೆ ಮಂಜೂರು ಮಾಡುವ ಬಗ್ಗೆ.

ಲೋಕಮಾನ್ಯ ಸೇವಾ ಟ್ರಸ್ಟ್ (ರಿ) ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ಸಹಾಯಧನ ಕೋರಿದ್ದು. ಲೆಕ್ಕ ಶೀರ್ಷಿಕೆ 01– ಕೌನ್ಸಿಲ್ ಪಿ ಕೋಡ್ 048ರಲ್ಲಿ ಕೊಡುಗೆಗಳು ಮತ್ತು ಸಹಾಯಧನಗಳ ಅಡಿಯಲ್ಲಿ ಮೊತ್ತ ರೂ. 800.00 (ಎಂಟು ನೂರು) ಲಕ್ಷಗಳನ್ನು ಸಂಘ ಸಂಸ್ಥೆಗಳಿಗೆ ಮೀಸಲಿರಿಸಿದೆ. ಸದರಿ ಮೊತ್ತದಲ್ಲಿ 113 ಸಂಘ ಸಂಸ್ಥೆಗಳಿಗೆ 635.00 (ಆರು ನೂರು ಮುವತ್ತೈದು) ಲಕ್ಷಗಳನ್ನು ಈಗಾಲೇ ನಿಗದಿಗೊಳಿಸಿದ್ದು ಉಳಿಕೆ ಮೊತ್ತ ರೂ.165.00 (ಒಂದು ನೂರು ಆರವತ್ತೈದು) ಲಕ್ಷಗಳಲ್ಲಿ 2016–17ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಕಡತಗಳಿಗೆ 2017–18ರ ಸಾಲಿನ ಅನುಮೋದಿತ ಅಯವ್ಯದಲ್ಲಿ ನೀಡುವಂತೆ ತೆರಿಗೆ ಆರ್ಥಿಕ ಸ್ಥಾಯಿ ಸಮಿತಿ ಅದ್ಯಕ್ಷರು, ಸೂಚಿಸಿರುತ್ತಾರೆ. ಅಲ್ಲದೆ Basketball federation of India ಸಂಸ್ಥೆಗೆ ಮೊತ್ತ ರೂ.50.00 (ಐವತ್ತು) ಲಕ್ಷಗಳನ್ನು ಈಗಾಲೇ ಬಿಡುಗಡೆಗೊಳಿಸಿರುವುದಲ್ಲದೆ 05 ಕಡತಗಳು ಪ್ರಸ್ತವನೆಯಲ್ಲಿರುವುದನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ಸಂಸ್ಥೆಯವರಿಗೆ ಸಹಾಯಧನ ಮಂಜೂರು ಮಾಡುವ ವಿಷಯದಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2017–18ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಲಭ್ಯತೆ ಇಲ್ಲದೆ ಇರುವುದರಿಂದ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.**

***19]. ವಿಷಯದ ಸಂಖ್ಯೆ: ತೆಲಸ್ಥಾಸ/ 209 /2017-18***

ಆಯುಕ್ತರ ದಿನಾಂಕ: 09-01-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಜೆ.ಪಿ.ನಗರ ಕನ್ನಡ ಗೆಳೆಯರ ಬಳಗ (ರಿ), ಮುನೇಶ್ವರ ದೇವಸ್ಥಾನ, 15ನೇ ಅಡ್ಡರಸ್ತೆ, (100 ಅಡಿ ವರ್ತುಲ ರಸ್ತೆ), ಜೆ.ಪಿ.ನಗರ, 2ನೇ ಹಂತ, ಸಂಪಿಗೆ ಮರ, ಬೆಂಗಳೂರು-560078, ರವರಿಗೆ 2017-18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 048, ಅನುಬಂಧ-03ರಲ್ಲಿ, ಕ್ರಮ ಸಂಖ್ಯೆ: 60ರಲ್ಲಿ ಮೊತ್ತ ರೂ.03.00 (ಮೂರು) ಲಕ್ಷಗಳನ್ನು ಸದರಿ ಸಂಸ್ಥೆಗೆ ಮೀಸಲಿರಿಸಲಾಗಿರುತ್ತದೆ.

ಈ ಸಂಬಂಧವಾಗಿ ಜೆ.ಪಿ.ನಗರ ಕನ್ನಡ ಗೆಳೆಯರ ಬಳಗ (ರಿ), ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ಅನುಮೋದಿತ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ ರೂ.03.00 (ಮೂರು) ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 09-01-2018ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***20]. ವಿಷಯದ ಸಂಖ್ಯೆ: ತೆಲಸ್ಥಾಸ/ 210 /2017-18***

ಜಂಟಿ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ ಮತ್ತು ಆರೋಗ್ಯ) ರವರ ದಿನಾಂಕ: 08-12-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ರವರ ಆದೇಶ ಸಂಖ್ಯೆ: ಪೌ.ನಿ/18/ಘವನಿ/2015-16 ದಿ:06-05-2016ರಲ್ಲಿ ಬಿಬಿಎಂಪಿಗೆ ಸ್ವಚ್ಛ ಭಾರತ್ ಅಭಿಯಾನದ ಅನುದಾನದಡಿಯಲ್ಲಿ ಕೇಂದ್ರದ ಪಾಲಿನ ಅನುದಾನ ರೂ.81.66 ಕೋಟಿಗಳು ಹಾಗೂ ರಾಜ್ಯದ ಪಾಲಿನ ಅನುದಾನ ರೂ.27.22 ಕೋಟಿಗಳು ಒಟ್ಟು ರೂ.108.88 ಕೋಟಿಗಳ ಅನುದಾನವನ್ನು ನಿಗಧಿಪಡಿಸಿ ಒಟ್ಟು ರೂ.41.15 ಕೋಟಿಗಳ ಅನುದಾನವನ್ನು ಬಿಬಿಎಂಪಿಗೆ ಬಿಡುಗಡೆ ಮಾಡಲಾಗಿತ್ತು.

ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ರವರು ಅನುದಾನ ನಿಗಧಿಪಡಿಸಿರುವಂತೆ 2016-17ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ3112 ಅಡಿಯಲ್ಲಿ ರೂ.50.69 ಕೋಟಿಗಳಿಗೆ ಹಾಗೂ 2017-18ನೇ ಸಾಲಿನಲ್ಲಿ ರೂ.400.00 ಲಕ್ಷಗಳಿಗೆ ಒಟ್ಟು ರೂ.60.69 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದ್ದು, ಉಳಿಕೆ ರೂ.48.19 ಕೋಟಿಗಳ ಅನುದಾನವನ್ನು ಸರ್ಕಾರದಿಂದ ನಿರೀಕ್ಷಿಸಿ ಬೆಳ್ಳಹಳ್ಳಿ, ಬಾಗಲೂರು ಮತ್ತು ಮಿಟ್ಟಗಾನಹಳ್ಳಿ ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ ಘಟಕಗಳ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಮಾನ್ಯ ಶಾಸಕರು ಮಹದೇವಪುರ ವಿಧಾನಸಭಾ ಕ್ಷೇತ್ರ ಹಾಗೂ ಕೃಷಿ ಸಚಿವರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ಶಾಸಕರು ರವರು ಸಾರ್ವಜನಿಕ ಸೇವಾ ಹಾಗೂ ಆರೋಗ್ಯ ಹಿತದೃಷ್ಟಿಯಿಂದ ಕೈಗೊಳ್ಳಬೇಕಾಗಿರುವ ಅಭಿವೃದ್ಧಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಲು ಕೋರಿರುವ ಕಾಮಗಾರಿಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು 2017-18ನೇ ಸಾಲಿನಲ್ಲಿ ಸ್ವಚ್ಛ ಭಾರತ್ ಅಭಿಯಾನ ಅನುದಾನ ಲೆಕ್ಕಶೀರ್ಷಿಕೆ ಪಿ3112 ಅಡಿ ಅಳವಡಿಸಿಕೊಳ್ಳುವುದನ್ನು ನಿರೀಕ್ಷಿಸಿ ಸಾರ್ವಜನಿಕ ಹಿತದೃಷ್ಟಿಯಿಂದ ಕಾಮಗಾರಿಗಳನ್ನು ಕೈಗೊಳ್ಳಲು ಜಾಬ್‌ಸಂಖ್ಯೆಯನ್ನು ನೀಡಲಾಗಿದೆ.

ಈ ಹಿನ್ನಲೆಯಲ್ಲಿ ಸ್ವಚ್ಛಭಾರತ್ ಅಭಿಯಾನ ಅನುದಾನ ರೂ.48.19 ಕೋಟಿಗಳನ್ನು ಲೆಕ್ಕಶೀರ್ಷಿಕೆ ಪಿ3112 ಅಡಿ 2017-18ನೇ ಸಾಲಿಗೆ ಅಳವಡಿಸಿಕೊಳ್ಳಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**-ಮುಂದೂಡಿದೆ-**

## *21]. ವಿಷಯದ ಸಂಖ್ಯೆ: ತೆಆಸ್ಥಾಸ/ 211 /2017-18*

**ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ: 04-01-2018ರ ಸಭೆಯ ಸ್ವಯಂ ನಿರ್ಣಯ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2017-18ನೇ ಸಾಲಿನ ಆಯ-ವ್ಯಯದ ಶಿಕ್ಷಣ ಇಲಾಖೆಯ ಲೆಕ್ಕ ಶೀರ್ಷಿಕೆ-18 ಶಿಕ್ಷಣ, ಆಡಳಿತಾತ್ಮಕ ವೆಚ್ಚಗಳು, ಸಾಮಾನ್ಯ ವೆಚ್ಚಗಳು, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ (ಪಿ-ಕೋಡ್1590) ರಲ್ಲಿ ಪ್ರವಾಸಕ್ಕೆಂದು ರೂ.185.00 ಲಕ್ಷಗಳು ಮೊತ್ತವನ್ನು ಮೀಸಲಿರಿಸಲಾಗಿರುತ್ತದೆ. ಸದರಿ ಅನುದಾನದಲ್ಲಿ ಶಿಕ್ಷಣ ಸ್ಥಾಯಿ ಸಮಿತಿಯ ವತಿಯಿಂದ ಶಾಲಾ / ಕಾಲೇಜುಗಳಿಗೆ ತಪಾಸಣೆಯನ್ನು ಕೈಗೊಂಡಾಗ ಸಂದರ್ಭದಲ್ಲಿ ಮೂಲಭೂತ ಸೌಕರ್ಯಗಳು ಹಾಗೂ ಕಟ್ಟಡದ ನಿರ್ವಹಣೆ, ದುರಸ್ಥಿ, ನಿರ್ಮಾಣ ಹಾಗೂ ಇತರೇ ಅವಶ್ಯ ಕಾಮಗಾರಿಗಳನ್ನು ಕೈಗೊಳ್ಳಲು ಅತ್ಯವಶವೆಂದು ತೀರ್ಮಾನಿಸಿ, ಸದರಿ ಅನುದಾದಲ್ಲಿ ರೂ.100.00 ಲಕ್ಷಗಳನ್ನು ಬಳಸಿಕೊಳ್ಳಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಸದರಿ ಅನುದಾನವನ್ನು ಪುನರ್ ವಿಂಗಡಣೆ ಕುರಿತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಶಿಕ್ಷಣ ಸ್ಥಾಯಿ ಸಮಿತಿಯ ತೀರ್ಮಾನದಂತೆ ಅನುದಾನವನ್ನು ಪುನರ್ ವಿನಿಯೋಗಿಸಿಕೊಳ್ಳಲು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *22]. ವಿಷಯದ ಸಂಖ್ಯೆ: ತೆಆಸ್ಥಾಸ/ 212 /2017-18*

**ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ: 04-01-2018ರ ಸಭೆಯ ಸ್ವಯಂ ನಿರ್ಣಯ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2017-18ನೇ ಸಾಲಿನ ಆಯ-ವ್ಯಯದ ಶಿಕ್ಷಣ ಇಲಾಖೆಯ ಲೆಕ್ಕ ಶೀರ್ಷಿಕೆ-18 ಶಿಕ್ಷಣ, ಪಾಲಿಕೆಯ ಶಾಲಾ / ಕಾಲೇಜು ವಿದ್ಯಾರ್ಥಿಗಳಿಗೆ ಆರೋಗ್ಯ ವಿಮೆಗೆಂದು ಪಿ-ಕೋಡ್: 3257ರಲ್ಲಿ ರೂ.175.00 ಲಕ್ಷಗಳ ಮೊತ್ತವನ್ನು ಮೀಸಲಿರಿಸಲಾಗಿರುತ್ತದೆ. ಶಿಕ್ಷಣ ಸ್ಥಾಯಿ ಸಮಿತಿಯ ವತಿಯಿಂದ ಶಾಲಾ / ಕಾಲೇಜುಗಳಿಗೆ ತಪಾಸಣೆಯನ್ನು ಕೈಗೊಂಡಾಗ ಸಂದರ್ಭದಲ್ಲಿ ಮೂಲಭೂತ ಸೌಕರ್ಯಗಳು ಹಾಗೂ ಕಟ್ಟಡದ ನಿರ್ವಹಣೆ, ದುರಸ್ಥಿ, ನಿರ್ಮಾಣ ಹಾಗೂ ಇತರೇ ಅವಶ್ಯ ಕಾಮಗಾರಿಗಳನ್ನು ಕೈಗೊಳ್ಳಲು ಅತ್ಯವಶ್ಯವೆಂದು ತೀರ್ಮಾನಿಸಿ, ಸದರಿ ಅನುದಾನವನ್ನು ಬಳಸಿಕೊಳ್ಳಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಸದರಿ ಅನುದಾನವನ್ನು ಪುನರ್ ವಿಂಗಡಣೆ ಕುರಿತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಶಿಕ್ಷಣ ಸ್ಥಾಯಿ ಸಮಿತಿಯ ತೀರ್ಮಾನದಂತೆ ಅನುದಾನವನ್ನು ಪುನರ್ ವಿನಿಯೋಗಿಸಿಕೊಳ್ಳಲು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *23]. ವಿಷಯದ ಸಂಖ್ಯೆ: ತೆಆಸ್ಥಾಸ/ 212-ಎ /2017-18*

**ಸುಮೋಟೋ ನಿರ್ಣಯ (SU-MOTO DECISION) :-**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಆಡಳಿತ ಪಕ್ಷದ ನಾಯಕರಾದ ಶ್ರೀ ಮಹಮ್ಮದ್ ರಿಜ್ವಾನ್ ನವಾಬ್ ರವರು ಪತ್ರವನ್ನು ನೀಡಿ, ಶ್ರೀಯುತರ ವಾರ್ಡ್-171ಕ್ಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯ ಸಂಖ್ಯೆ: ತೆಆಸ್ಥಾಸ/173/2017-18, ದಿನಾಂಕ: 15-12-2017ರಲ್ಲಿ ಮರು ಹೊಂದಾಣಿಕೆ ಮೂಲಕ ರೂ.11.00 ಕೋಟಿಗಳನ್ನು ಮೀಸಲಿರಿಸಿದ್ದು, ಆಡಳಿತ ಪಕ್ಷದ ನಾಯಕನಾಗಿರುವ ಹಿನ್ನೆಲೆಯಲ್ಲಿ, ಹಲವಾರು ಶಾಸಕರು ಮತ್ತು ಪಾಲಿಕೆ ಸದಸ್ಯರು ನನ್ನನ್ನು ಭೇಟಿ ಮಾಡಿ ತಮ್ಮ ಕ್ಷೇತ್ರಕ್ಕೆ ಕಡಿಮೆ ಅನುದಾನ ಹಂಚಿಕೆಯಾಗಿದ್ದು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಹೆಚ್ಚಿನ ಅನುದಾನವನ್ನು ನೀಡುವಂತೆ ಕೋರಿರುವ ಹಿನ್ನೆಲೆಯಲ್ಲಿ ತಮ್ಮ ವಾರ್ಡ್‌ಗೆ ಹಂಚಿಕೆ ಮಾಡಿರುವ ಅನುದಾನದಲ್ಲಿ ಸದಸ್ಯರು

ಕೋರಿರುವ ವಾರ್ಡ್‌ಗಳಿಗೆ ಈ ಕೆಳಕಂಡಂತೆ ಹಂಚಿಕೆ ಮಾಡಲು ಉದ್ದೇಶಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ನಿರ್ಣಯ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

ಆದ್ದರಿಂದ, ಶ್ರೀಯುತರು ಕೋರಿರುವಂತೆ ವಾರ್ಡ್ 171ಕ್ಕೆ ಹಂಚಿಕೆ ಮಾಡಿರುವ ಒಟ್ಟು ಮೊತ್ತ ರೂ.11.00 ಕೋಟಿಗಳನ್ನು, ಈ ಕೆಳಕಂಡಂತೆ ವಾರ್ಡ್‌ಗಳಿಗೆ ಮರುಹಂಚಿಕೆ ಮಾಡಿ ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.

| ಕ್ರಮ ಸಂಖ್ಯೆ | ವಾರ್ಡ್ ಸಂಖ್ಯೆ | ಹಂಚಿಕೆ ಮಾಡಿರುವ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 01 | **1** | 75.00 |
| 02 | **13** | 50.00 |
| 03 | **65** | 25.00 |
| 04 | **73** | 200.00 |
| 05 | **152** | 350.00 |
| 06 | **163** | 50.00 |
| 07 | **187** | 200.00 |
| 08 | **194** | 150.00 |

**(ಮಹದೇವ. ಎಂ)**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**